ಮಾಡುತ್ತಿಲ್ಲವೆಂದು ಅತ್ಯಂತ ದುಃಖದಿಂದ ಹೇಳುತ್ತಾ, ನಾನು ರೈತ ಸಂಘದ ಜೊತೆಯಲ್ಲಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಸಂದರ್ಭದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿದ್ದು ಯಾರ ಮನಸ್ಸಿಗೂ ನೋವು ಮಾಡಬೇಕೆಂದಲ್ಲ. ನಾನು ಮಾತನಾಡಲು ಪ್ರಯತ್ನ ಮಾಡಿದಂಥ ಸಂದರ್ಭದಲ್ಲಿ ಈ ಸದನದಲ್ಲಿ ಯಾವುದೇ ಸದಸ್ಯರಿಗಾಗಲಿ, ತಮಗಾಗಲಿ ನೋವನ್ನುಂಟು ಮಾಡುವ ಉದ್ದೇಶದಿಂದ ನಾನು ಮಾತನಾಡಲಿಲ್ಲ. ನನ್ನ ನೋವು ಏನೆಂದರೆ, ನಾನು ಏನು ಹೇಳಲಿಕ್ಕೆ ಹೊರಟ್ಟಿದ್ದೆನೆಂದರೆ, ಇದುವರೆಗೆ ಈ ರೈತನ ಪ್ರಶ್ನೆ ಬಂದಾಗ, ಕಾವೇರಿ ಜಲ ವಿವಾದದ ಪ್ರಶ್ನೆ ಬಂದಾಗ ನಾವು ಒಂದಾಗಿ ಕೆಲಸ ಮಾಡಿದ್ದೇವೆ. ಆದರೆ, ವಿರೋಧ ಪಕ್ಷದಲ್ಲಿ ಇದ್ದುಕೊಂಡು ಈ ರೀತಿ ವರ್ತನೆ ಮಾಡುತ್ತಿರುವುದು ಸರಿಯಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದಂಥ ಸಂದರ್ಭದಲ್ಲಿ....

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇವರ ವರ್ತನೆ ಸರಿಯಾದಂತೆ ಕಾಣಲಿಲ್ಲ. ಅವರ ವರ್ತನೆ ಸರಿಯಾಗುವವರೆಗೆ ನಮಗೆ ಈ ಸದನದಲ್ಲಿ ಕೆಲಸ ಮಾಡಲಿಕ್ಕೆ ಇಷ್ಟವಿಲ್ಲ. ಆದುದರಿಂದ, ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಸಂದರ್ಭದಲ್ಲಿ ಶ್ರೀ ಡಿ.ಬಿ. ಚಂದ್ರೇಗೌಡರ ಜೊತೆಯಲ್ಲಿ, ಶ್ರೀಯುತರುಗಳಾದ ಆರ್.ವಿ. ದೇಶಪಾಂಡೆ, ಎಚ್. ವಿಶ್ವನಾಥಯ್ಯ. ಆರ್.ಎಲ್. ಜಾಲಪ್ಪ, ಡಾ: ಜೀವರಾಜ ಆಳ್ವ, ಪಿ.ಜಿ.ಆರ್. ಸಿಂಧ್ಯಾ, ಶಿವಾನಂದ ಎಚ್.ಕೌಜಲಲಗಿ, ಬಿ.ಹೆಚ್. ಬನ್ನಿಕೋಡ್. ಜೆ.ಸಿ. ಮಾಧುಸ್ವಾಮಿ ಹಾಗೂ ಇನ್ನು ಕೆಲವು ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅವರು ಕ್ಷಮಾಪಣೆ ಕೇಳಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕ್ಷಮಾಪಣೆ ಕೇಳಿಕೊಳ್ಳುವುದಕ್ಕಾಗುವುದಿಲ್ಲ, ವಿರೋಧಪಕ್ಷದವರಾದ ನೀವು ಕಾಂಗ್ರೆಸ್ ಪಕ್ಷದೊಂದಿಗೆ ವಿಜೆಂಟ್ ಆಗಿ ಕೆಲಸ ಮಾಡುತ್ತಿದ್ದೀರಿ. ನೀವು ಸರ್ಕಾರದ ಜೊತೆ ಶಾಮೀಲಾಗಿದ್ದೀರಿ, ಅದು ಸ್ಪಷ್ಟವಾಗಿದೆ, ಜನತೆಯೇ ಅದನ್ನು ತೀರ್ಮಾನ ಮಾಡಲಿ...

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ.

(ಗೊಂದಲ)

ಎಂ.ಪಿ. ವೆಂಕಟೇಶ್ : ಇವರ ನಡವಳಿಕೆಯನ್ನು ನೋಡಿದರೆ ತಮಿಳುನಾಡಿಗೆ ಅನುಕೂಲ ಮಾಡಿಕೊಡುವಂತೆ ಕಾಣುತ್ತಿದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಅತ್ಯಂತ ಗುರುತರವಾದಂತಹ ಈ ರಾಜ್ಯದ ರೈತರ ಮೇಲೆ ಅತ್ಯಂತ ಪ್ರಭಾವ ಬೀರತಕ್ಕ